ಶ್ರೀ ಡಿ.ಬಿ. ಇನಾಂದಾರ್ :- ಮಾನ್ಯ ಅಧ್ಯಕ್ಷರೆ, ಧಾರ್ಮಿಕ ಸ್ಥಳಗಳ ಬಗ್ಗೆ ಹೇಳಿರುವ ಮಾತನ್ನು ಸರ್ಕಾರ ಒಪ್ಪಿದೆ ಎನ್ನತಕ್ಕಂತಹ ಮಾತನ್ನು ಹೇಳುತ್ತೇನೆ. ಧಾರ್ಮಿಕ ಸ್ಥಳಗಳು ಬೇರೆ, ಪ್ರವಾಸೋದ್ದಿಮೆ ಸ್ಥಳಗಳು ಬೇರೆ. ಧಾರ್ಮಿಕ ಸ್ಥಳಗಳಿಗೆ ಮುಜರಾಯಿ ಇಲಾಖೆಯಿಂದ ಏನು ಅನುದಾನ ಕೊಡಬೇಕು, ಸಹಾಯಧನ ಕೊಡಬೇಕು ಅದನ್ನು ಮುಜರಾಯಿ ಇಲಾಖೆಯವರು ಮಾಡುತ್ತಿದ್ದಾರೆ. ಇವತ್ತಿನ ದಿವಸ ಕೇಂದ್ರ ಸರ್ಕಾರ ಸರ್ಕಿಟ್‌ಗಳನ್ನು ಮಾಡಿ ಆ ಸರ್ಕಿಟ್‌ಗಳನ್ನು ಮಾತ್ರ ಡೆವಲಪ್ ಮಾಡುವ ನೀತಿಯನ್ನು ಕೇಂದ್ರ ಸರ್ಕಾರ ತಾಳಿದೆ ಆ ನಿಟ್ಟಿನಿಂದ ಸರ್ಕಿಟ್‌ನಲ್ಲಿ ಬರತಕ್ಕಂತಹ ಸ್ಥಳಗಳನ್ನು ನಾವು ಮೊದಲು ಸುಧಾರಣೆ ಮಾಡುವ ಕಾರ್ಯವನ್ನು ನಮ್ಮ ಇಲಾಖೆ ವತಿಯಿಂದ ಮಾಡುತ್ತಿದ್ದೇವೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಎಷ್ಟು ಜನ ಪ್ರವಾಸಿಗರು ಬರುತ್ತಾರೆ ಎನ್ನುವ ಬಗ್ಗೆ ನಾವು ಪರಿಶೀಲನೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುವ ಬಗ್ಗೆ ವಿಚಾರ ಮಾಡುತ್ತೇವೆಂದು ನಾನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಸಂಗಪ್ಪ ಕಲ್ಲಪ್ಪ ಬೆಳ್ಳುಬ್ಬಿ:- ಮಾನ್ಯ ಅಧ್ಯಕ್ಷರೆ, ಈ ಹಿಂದೆ ಬಸವನ ಬಾಗೇವಾಡಿಯಲ್ಲಿ ಕೇಂದ್ರ ಸರ್ಕಾರದ ಯಾತ್ರೀ ನಿವಾಸ ಕಟ್ಟುತ್ತೇವೆಂದು ಹೇಳಿದ್ದರು, ರಾಜ್ಯ ಸರ್ಕಾರದಿಂದ ಅದರ ಪ್ರಸ್ತಾವನೆ ಕೂಡ ಹೋಗಿತ್ತು, ಅದು ಈಗ ಯಾವ ಹಂತದಲ್ಲಿದೆ ಎನ್ನುವುದನ್ನು ದಯವಿಟ್ಟು ತಾವು ತಿಳಿಸಬೇಕು.

ಶ್ರೀ ಡಿ.ಬಿ. ಇನಾಂದಾರ್ :- ಬಸವನ ಬಾಗೇವಾಡಿಯಲ್ಲಿ ಪಬ್ಲಿಕ್ ಕನ್‌ವೀನಿಯನ್ಸ್ ಅಂಡ್ ಡ್ರಿಂಕಿಂಗ್ ವಾಟರ್ ಫೆಸಿಲಿಟಿಗೆ 18.50 ಲಕ್ಷ ರೂಪಾಯಿ ಖರ್ಚು ಮಾಡುವ ಪ್ರಸ್ತಾವನೆಯನ್ನು ತಯಾರು ಮಾಡಲಾಗಿದೆ ಎಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಸಂಗಪ್ಪ ಕಲ್ಲಪ್ಪ ಬೆಳ್ಳುಬ್ಬಿ:- ನಾನು ಕೇಳಿದ್ದು 17 ರೂ. ನದ್ದು ಅಲ್ಲ, ಕೇಂದ್ರ ಸರ್ಕಾರದ ಯಾತ್ರೀ ನಿವಾಸ ಕಟ್ಟಬೇಕೆಂದು ಪ್ರವಾಸೋದ್ಯಮ ಇಲಾಖೆ ನಾಲ್ಕು ಎಕರೆ ಜಮೀನು ಖರೀದಿ ಮಾಡಿದೆ. ಆ ಜಮೀನಿನಲ್ಲಿ ಕೇಂದ್ರ ಸರ್ಕಾರದ ಸಕಲೇಟ್ ಅನುದಾನ ಕೊಡುತ್ತೇವೆಂದು ಹೇಳಿದ್ದರು, ರಾಜ್ಯ ಸರ್ಕಾರದಿಂದ ಪ್ರಸ್ತಾವನೆ ಹೋಗಿತ್ತು. ಪ್ರಸ್ತಾವನೆ ಹೋಗಿ ಸುಮಾರು ಎರಡು ವರ್ಷಗಳಾಗಿತ್ತು. ಅದರ ಬಗ್ಗೆ ತಿಳಿಸಿ.

ಶ್ರೀ ಡಿ.ಬಿ. ಇನಾಂದಾರ್ :- ಮಂಜೂರಾತಿ ಬಂದಿಲ್ಲ. ಕೇಂದ್ರ ಸರ್ಕಾರದ ನಿಲುವಿನ ಬಗ್ಗೆ ನಾನು ನಿಮಗೆ ತಿಳಿಸಿದ್ದೇನೆ. ಕೇಂದ್ರ ಸರ್ಕಾರ ಇದನ್ನು ನಿರಾಕರಿಸಿದೆ.

ಬೀದರ್ ಜಿಲ್ಲೆಯಲ್ಲಿ ನಬಾರ್ಡ್ ಅನುದಾನದಲ್ಲಿ ಕೈಗೊಂಡ ಕಾಮಗಾರಿಗಳು

229 (2455) ಶ್ರೀ ರಾಜೇಂದ್ರ ವರ್ಮ (ಹುಲಸೂರ್) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕಳೆದ 3 ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯವರು ನಬಾರ್ಡ್ ಧನ ಸಹಾಯದಿಂದ ತೆಗೆದುಕೊಂಡಿರುವ ಕಾಮಗಾರಿಗಳ ವಿವರಗಳೇನು? ಈ ಪೈಕಿ ಎಷ್ಟು ಕಾಮಗಾರಿಗಳು ಮುಕ್ತಾಯಗೊಂಡಿವೆ ಹಾಗೂ ಎಷ್ಟು ಪ್ರಗತಿಯಲ್ಲಿವೆ? (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು)

ಆ. ಇಂತಹ ಕಾಮಗಾರಿಗಳಿಗಾಗಿ ನಬಾರ್ಡ್‌ನಿಂದ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ನೀಡಲಾಗಿರುವ ಹಣವೆಷ್ಟು? (ವರ್ಷವಾರು ವಿವರಗಳನ್ನು ಒದಗಿಸುವುದು)

ಇ. ಕಳೆದ 2 ವರ್ಷಗಳಿಂದ ನಬಾರ್ಡಿನ ಅನುದಾನದಿಂದ ಬೀದರ್ ಜಿಲ್ಲೆಯಲ್ಲಿ ಯಾವುದೇ ಕಾಮಗಾರಿಯನ್ನು ತೆಗೆದುಕೊಳ್ಳದೇ ಇರಲು ಕಾರಣಗಳೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ. 1999-2000, 2000-01 ಮತ್ತು 2001-02ನೇ ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಡಿ 1602.85 ಲಕ್ಷ ರೂ. ಮೊತ್ತದ 25 ರಸ್ತೆ ಮತ್ತು 5 ಸೇತುವೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇದರಲ್ಲಿ 15 ರಸ್ತೆ ಮತ್ತು 3 ಸೇತುವೆ ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ 10 ರಸ್ತೆ ಮತ್ತು 2 ಸೇತುವೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ. ನಬಾರ್ಡ್‌ನಿಂದ ಮಂಜೂರಾದ ಕಾಮಗಾರಿವಾರು ಅಂದಾಜು ಮೊತ್ತವನ್ನು ಅನುಬಂಧದಲ್ಲಿ ನೀಡಿದೆ.

ಇ. 2000-01 ಮತ್ತು 2001-02ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ 15 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ವರ್ಷವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ವಿಧಾನಸಭೆ ಪ್ರಶ್ನೆ ಸಂಖ್ಯೆ 2455ರ ಅನುಬಂಧ

1999-2000, 2000-01 ಮತ್ತು 2001-02ರಲ್ಲಿ ಬೀದರ್ ಜಿಲ್ಲೆಯಲ್ಲಿ ಅನುಮೋದನೆಯಾದ ನಬಾರ್ಡ್ ಕಾಮಗಾರಿಗಳ ವಿಧಾನಸಭಾ ಕ್ಷೇತ್ರವಾರು ವಿವರ

Scheme	Constituency	Name of the work	Estimated Cost Rs. In lakh	Present Stage
		RIDF-V (1999-2000)		
V	Aurad	Impts. to road from Sangam to Sonala via Khedhulloor sonala wadi in Aurad taluk	68.30	completed
V	Aurad	Kushnoor (T) to Duduknal via Korekal, Jamalpur in Aurad taluk.	83.20	Work nearing completion
V.	B. Kalyana	Impts to Chandakapur border to Attarga in B. Kalyana taluk	60.00	Completed
V	B. Kalyana	Impts to Rajola Rajeshwar road in B. Kalyana taluk.	32.00	Completed
V	B. Kalyana	Impts to Pathapur Jaijanmugali road in B. Kalyana taluk.	42.00	Completed
V	B. Kalyana	Impts to NH 9 to Kavadihal road in B. Kalyana taluk	74.90	Completed

1	2	3	4	5
V.	Bhalki	Impts to Bhatambra Bharasan-gavi road via Kasthurgaon in Bhalki taluk.	51.00	Completed
V.	Bhalki	Impts to Bathambra Bhata-sanghvi and onto Thungaon in Bhalki taluk.	33.00	Completed
V.	Bidar	Impts to Chakandi Gumma Malegaon road in Bidar taluk.	65.00	Work in Progress
V.	Bidar	Manikeswar to Attarga road in Bhalki taluk	38.19	Completed
V.	Hulsoor	Manikeswar to Attarge road in Bhalki taluk.	50.00	Work nearing Completion
V.	Hulsoor	Impts to Basavakalyana BN road in Kalyana taluk	59.00	Completed
V.	Hulsoor	Impts to Kesarjawalaga Alavai road from Km 14.00 to 22.00 in Bhalki taluk.	44.50	Completed
V.	Humnabad	Impts. to approach road to Nookin thaanda via Badalgur in Humnadad taluk	54.56	Completed
V.	Humnabad	Impt to Laldhari Chitaguppa Humnabad taluk RIDF-VI (2000-01)	60.00	Completed
VI	B. Kalyana	Impts to Khinoor Pahad to Hattarga (S) via Betagera in B. Kalyana taluk	89.84	Work nearing Completion
VI	Bhalki	Impts to Janawad Bompalli road via Islampur	100.00	Working in Progress
VI	Bidar	Constn of MCPC across Malegaon nala on Chowkandhi Gumma Malegaon road at 5.80 km	41.39	Pipe casting in progress

1	2	3	4	5
VI	Hulsoor	Impts to Kotmal to Maharashtra border road	30.00	Completed
VI	Humnabad	Impts. to approach road to Sirsi (Aurad)	66.77	Work in Progress
VI	Humnabad	Impts to Udabhala Belamakhed Nirna Wadi Vittalapura road	13.00	Work in Progress
VI	Humnabad	Impts to Yenakur Kaumar chinchali road	47.30	Completed
		RIDF-VII (2001-02)		
VII	Humnabad	Construction of bridge at 0.60Km of Mangalagi	22.00	Work nearing completion
VII	Aurad	Impts to Mudhol to Rampur via Toma village	90.00	Work in Progress
VII	Bhalki	Constn of bridge across Buden nala on Old Bhallki road to Siddapurwadi road	10.00	Completed
VII	Aurad	Impts to road from Malegon Thanda cross to Kurubarawadi Rooplathanda	45.00	Completed
VII	Hulsoor	Impts to Hulsoor Halahalli road	47.00	Work in progress
VII	Bhalki	Construction of bridge on Bhalki Anandwadi road joining Eklasapur	10.00	Work completed
VII	Hulsoor	Impts to Hulsoor Halahalli		
VII	Bhalki	Construction of bridge across Raneranala on Old Bhalki road to Ramtheerthawadi road	8.00	Completed
VII	Hulsoor	Impts to Nandagaon Kabirbadwadi road	50.00	Work in progress

ಶ್ರೀ ರಾಜೇಂದ್ರವರ್ಮ :- ಮಾನ್ಯ ಅಧ್ಯಕ್ಷರೆ, ನಬಾರ್ಡ್‌ದಿಂದ 1999-2000 ಹಾಗೂ 2000-01ನೇ ಇಸವಿಯಲ್ಲಿ ತೆಗೆದುಕೊಂಡಿರತಕ್ಕಂತಹ ಕೆಲಸಗಳು ನಡೆಯುತ್ತಿವೆ. 2000 ಮತ್ತು 2003ನೇ ಸಾಲಿನಲ್ಲಿ ನಬಾರ್ಡ್‌ನಿಂದ ಯಾವುದೇ ಕೆಲಸಗಳು ಮಂಜೂರಾಗಿಲ್ಲ. ಅವರು ಸರಿಯಾದ ಮಾಹಿತಿ ಕೊಟ್ಟಿಲ್ಲ. ದಯಮಾಡಿ ಸರಿಯಾದ ಮಾಹಿತಿಯನ್ನು ಕೊಡಬೇಕು. ಒಂದು ರೇಳೆ ನಬಾರ್ಡ್‌ನಲ್ಲಿ ತೆಗೆದುಕೊಂಡಿದ್ದೇ ಆದರೆ ಎರಡು ವರ್ಷಗಳ ಹಿಂದೆ ನನ್ನ ಕ್ಷೇತ್ರದಲ್ಲಿರತಕ್ಕಂತಹ ಧನ್ನೂರಕ್ಕೆ ಮತ್ತು ಘಾಟ್‌ಭಾಳದ ಒಂದು ರಸ್ತೆಯನ್ನು ನಬಾರ್ಡ್‌ನಲ್ಲಿ ತೆಗೆದುಕೊಳ್ಳಿ ಎಂದು ಬರೆದಿದ್ದೆ. ಆದರೆ ಅದನ್ನು ಏಕೆ ಮಂಜೂರಾತಿ ಮಾಡಲಿಲ್ಲ? ದಯವಿಟ್ಟು ಮಾನ್ಯ ಸಚಿವರು ಅದನ್ನು ತಿಳಿಸಬೇಕು.

ಶ್ರೀ ಧರ್ಮ್‌ಸಿಂಗ್ ನಾರಾಯಣಸಿಂಗ್ :- ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿ ಒಟ್ಟಾರೆ ಮೂರು ವರ್ಷಗಳ ಅವಧಿಯಲ್ಲಿ ನಾವು ಕೆಲಸಕಾರ್ಯಗಳನ್ನು ತೆಗೆದುಕೊಂಡಿದ್ದೇವೆ ಎಂದೂ ಕೂಡ ಉತ್ತರದಲ್ಲಿ ಹೇಳಿದ್ದೇನೆ. ಹೋದ ವರ್ಷ ನಬಾರ್ಡ್‌ನಲ್ಲಿ ಬೇರೆ ಕೆಲಸ ಕಾರ್ಯಗಳ ತೆಗೆದುಕೊಂಡಿರುವುದನ್ನು ಅವರು ಹೇಳಿದ್ದಾರೆ. ಒಟ್ಟಾರೆ ಈಗಾಗಲೇ ಬೀದರ್ ಜಿಲ್ಲೆಯಲ್ಲಿ 16.85 ಲಕ್ಷ ರೂಪಾಯಿ ಕೆಲಸಕಾರ್ಯಗಳನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ ಈಗಾಗಲೇ 15 ರಸ್ತೆ ಮತ್ತು ಮೂರು ಸೇತುವೆ ಕಾರ್ಯ ಮುಗಿಸಿದ್ದೇವೆ. ಪ್ರತಿ ಕ್ಷೇತ್ರದಲ್ಲಿ ಕೂಡ ಎಲ್ಲಾ ಕಡೆಗೆ ಸರಿ ಸಮಾನವಾಗಿ ಹಂಚಿತಕ್ಕಂತಹ ಕೆಲಸ ಮಾಡಿದ್ದೇವೆ.

11.30 ಎ.ಎಂ.

ನಬಾರ್ಡ್ 9ರಲ್ಲಿ ಮತ್ತೆ ಈಗಾಗಲೇ ಮುಖ್ಯಮಂತ್ರಿಗಳೂ ಕೂಡ ಬಜೆಟ್ ಮಂಡಿಸುತ್ತಾ ಹೇಳಿದ್ದಾರೆ, 280 ಕೋಟಿ ರೂಪಾಯಿಗಳಿಂದ 325 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ ಎಂದು ಅದರಲ್ಲಿ ನಬಾರ್ಡ್ ಮತ್ತು 9ರಲ್ಲಿ ಕೂಡ ಹೊಸ ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡತಕ್ಕದ್ದರ ಬಗ್ಗೆ ಕೂಡ ಕೆಲಸ ಮಾಡುತ್ತಿದ್ದೇವೆ. ಬೀದರ್ ಜಿಲ್ಲೆ ಗಡಿ ಪ್ರದೇಶ, ಅಲ್ಲಿ ಹೆಚ್ಚಿನ ರೀತಿಯಲ್ಲಿ ಆದ್ಯತೆಯನ್ನು ನಾವು ಕೊಟ್ಟಿದ್ದೇವೆ. ಹೆಚ್ಚು ಹಣವನ್ನೂ ಕೂಡ ಕೊಟ್ಟಿದ್ದೇವೆ. ಉಳಿದ ಅಪೂರ್ಣವಾದ ಕೆಲಸವೇನಿದೆ ಅದನ್ನು ಈ ವರ್ಷ ಮುಗಿಸತಕ್ಕಂಥ ಪ್ರಯತ್ನವನ್ನು ಕೂಡ ನಾವು ಮಾಡುತ್ತೇವೆ.

ಶ್ರೀ ರಾಜೇಂದ್ರವರ್ಮಾ :- ಮಾನ್ಯ ಅಧ್ಯಕ್ಷರೆ, ಈ ಸದನದ ಮೂಲಕ ಮಾನ್ಯ ಸಚಿವರಲ್ಲಿ ಒಂದು ವಿನಂತಿ ಮಾಡುವುದೇನೆಂದರೆ, ಈಗ ಎಷ್ಟು ಕೆಲಸವಾಗಿದೆಯೋ ಅದಕ್ಕೆ ಕನೆಕ್ಟೀವ್ ಆಗಿ ಬ್ರಿಡ್ಜ್‌ಸ್‌ಗಳನ್ನು ತೆಗೆದುಕೊಳ್ಳಲಿಲ್ಲ. ಈಗ ಆ ರೋಡ್‌ಗಳೆಲ್ಲಾ ಹಾಗೆಯೇ ಉಳಿದಿವೆ. ಅಲ್ಲಿ ಮಳೆಗಾಲದಲ್ಲಿ ಹೋಗುವುದಕ್ಕೆ, ಬರುವುದಕ್ಕೆ ಆಗುವುದಿಲ್ಲ. ದಯವಿಟ್ಟು ಈ ಮಾಣಿಕೇಶ್ವರ್ ಮತ್ತು ಅಟ್ಟಾಳ್ವಾಂಗೆ ಹೋಗುವಂಥ ರಸ್ತೆಗೆ ಸೇತುವೆ ನಿರ್ಮಾಣ ಮಾಡುವಂಥದ್ದು ಆಗಬೇಕಾಗಿದೆ. ಒಂದು ವರ್ಷದ ಹಿಂದೆ ನಮ್ಮ ಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಭೇಟಿ ಕೊಟ್ಟಿದ್ದ ಸಂದರ್ಭದಲ್ಲಿ ಒಂದು ಸಾಯಿಗಾಂವ್ ಬ್ರಿಡ್ಜ್‌ನ್ನು ಈ ಮಾರ್ಗದಲ್ಲಿ ಕಟ್ಟುವುದಕ್ಕೆ ಅನುಮತಿಯನ್ನು ನಾನು ಕೊಡುತ್ತೇನೆ ಎಂದು ಸಾರ್ವಜನಿಕರಿಗೆ ಹೇಳಿಬಂದಿದ್ದಾರೆ. ಆದರೆ ಅದರ ಬಗ್ಗೆ ಇಲ್ಲಿಯವರೆಗೆ ಏಮೋಲ ಕೆಲಸವಾಗಿಲ್ಲ. ದಯವಿಟ್ಟು ಅದರ ಬಗ್ಗೆ ಸ್ವಲ್ಪ ಹೇಳಬೇಕೆಂದು ನಾನು ನಿರೀಕ್ಷಿಸುತ್ತೇನೆ.

ಶ್ರೀ ಎನ್. ಧರ್ಮಸಿಂಗ್ :- ಈಗ ರಸ್ತೆ ಮತ್ತು ಸೇತುವೆ ಒಂದೇ ಸಮನೆ ಹೋಗಬೇಕಾಗುತ್ತದೆ. ರಸ್ತೆ ಮಾಡಿ ಸೇತುವೆ ಮಾಡದಿದ್ದರೂ ಕೂಡ ಅನಾನುಕೂಲವಾಗುತ್ತದೆ.

ಅದಕ್ಕೇ ನಾವು 148 ಸೇತುವೆಗಳನ್ನು ಮಾಡತಕ್ಕದ್ದರ ಬಗ್ಗೆ ಬೇರೆ ಕಡೆಗಳಲ್ಲಿ, ಹಾಗೆಯೇ ಬೀದರ್ ಜಿಲ್ಲೆಯಲ್ಲೂ ಕೂಡ ತೆಗೆದುಕೊಂಡಿದ್ದೇವೆ. ಸ್ವಲ್ಪ ಕ್ಷೇತ್ರಕ್ಕೂ ಕೂಡ ಹೋಗಿ ಬಂದಿದ್ದೇವೆ. ಆ ರೀತಿ ಅಲ್ಲಿಗೂ ಹೋಗಿದ್ದೇವೆ. ಆ ಸಾಯಿಗಾಂವ್ ಬ್ರಿಡ್ಜ್ ಈ ಹಿಂದೆಯೇ ವಿರೇಂದ್ರ ಪಾಟೀಲರ ಕಾಲದಲ್ಲಿ 1964ರಲ್ಲಿ ಆಗಿದ್ದು ಅಲ್ಲಿ ಜನರು ಹೋಗುವುದಕ್ಕೆ ಆಗುತ್ತಿರಲಿಲ್ಲ. ಅದಕ್ಕೆ ನಾವು ಏನು ಮಾಡಿದ್ದೇವೆಂದರೆ, ಸುಮಾರು 13 ಕೋಟಿ ರೂ.ಗಳ ವೆಚ್ಚದಲ್ಲಿರುವ ಕೆಲಸವೇನಿದೆ ಅದು ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಬರುತ್ತಿದ್ದು ಈ ಬಗ್ಗೆ ಕ್ಯಾಬಿನೆಟ್ ಸಬ್ ಕಮಿಟಿ ಮುಂದೆ ಕೂಡ ವಿಚಾರವಿದೆ. ಅದರ ಬಗ್ಗೆ ನಾವು ಏನು ಆಶ್ವಾಸನೆಯನ್ನು ಕೊಟ್ಟಿದ್ದೇವೆ ಆ ಪ್ರಕಾರ ಈ ವರ್ಷ ಮಾಡತಕ್ಕದ್ದರ ಬಗ್ಗೆ ಕೂಡ ಭರವಸೆಯನ್ನು ಕೊಡುತ್ತೇನೆ.

ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಅಬ್ಬಿಕೆರೆ ಗ್ರಾಮ ಪಂಚಾಯತಿಯ ಲಕ್ಷ್ಮೀಪುರದ ಗೊಮಾಳವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಬಗ್ಗೆ

230 (2465) ಶ್ರೀ ಅಶೋಕ್ ಆರ್. (ಉತ್ತರಹಳ್ಳಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಅಬ್ಬಿಕೆರೆ ಗ್ರಾಮ ಪಂಚಾಯಿತಿಯ ಲಕ್ಷ್ಮೀಪುರ ಗ್ರಾಮದ ಸರ್ವೆ ನಂ. 11ರಲ್ಲಿ ಸರ್ಕಾರಿ ಗೋಮಾಳದ ಜಮೀನು ಎಷ್ಟು ಎಕರೆಗಳಿವೆ;

ಆ. ಈ ಜಮೀನಿನಲ್ಲಿ ಬಗರ್‌ಹುಕುಂ ಸಾಗುವಳಿ ಫಲಾನುಭವಿಗಳಿಗೆ ಎಷ್ಟು ಎಕರೆ ಜಾಗವನ್ನು ವಿತರಿಸಲಾಗಿದೆ ;

ಇ. ಉಳಿಕೆ ಜಮೀನನ್ನು ಬೋಗಳ್ಳರು ಕಬಳಿಸಿದ್ದಾರೆಯೇ; ಹಾಗಿದ್ದರೆ ಅವರುಗಳ ಹೆಸರುಗಳನ್ನು ತಿಳಿಸುವುದು;

ಈ. ಆ ಜಾಗವನ್ನು ಯಾವಾಗ ತೆರವುಗೊಳಿಸಲಾಗುವುದು; ಅದಕ್ಕೆ ಕಾಲಮಿತಿ ಹಾಕಿಕೊಳ್ಳಲಾಗುವುದೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ. 103-14 ಎಕರೆ ಜಮೀನಿರುತ್ತದೆ.

ಆ. 72.00 ಎಕರೆ ವಿತರಿಸಲಾಗಿದೆ.

ಇ. ಹೌದು, ವಿವರಗಳನ್ನು ಈ ಕೆಳಕಂಡಂತೆ ಇರುತ್ತದೆ.

ಹೆಸರು	ವಿಸ್ತೀರ್ಣ ಎಕರೆ
ಕೆ.ವಿ. ಪ್ರಕಾಶ್	3.00
ಹುಚ್ಚಪ್ಪ ಮತ್ತು ಗಂಗಪ್ಪ	2.00 ತಲಾ 1.00
ಸೈಯದ್ ನೂರು ಅಹಮದ್ ಹಾಗೂ ರಾಮಕೃಷ್ಣ	4.00 ತಲಾ 2.00
ಎನ್. ಹರಿಹರ	1.00
ಲಿಂಗಚಾರಿ	1.00